## ಪ್ರತಿಭೆ ಒರೆಹಚ್ಚಿದ ಸಾಧನಗಳು ● ಗಮನ ಸೆಳೆದ ಪ್ರದರ್ಶನ

# ಚರಂಡಿ ನೀರಿನಲ್ಲಿ ವಿದ್ಯುತ್..!

Prajavani - 15/05/18 - P.no:- 03

ಪ್ರಜಾವಾಣಿ ವಾರ್ತೆ




ಆನೇಕಲ್ ತಾಲ್ಲೂಕಿನ ಗುಡ್ನನಹಳ್ಳಿ ಸಮೀಪದ ಶಿರಡಿ ಸಾಯಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಅಂತಿಮ ವರ್ಷದ ಬಿಇ ವಿದ್ಯಾರ್ಥಿಗಳು ಪ್ರಾಜೆಕ್ಟ್ ಪ್ರದರ್ಶನದಲ್ಲಿ ಸಣ್ಣ ಟ್ರ್ಯಾಕ್ಟರ್ ಪ್ರದರ್ಶಿಸಿದರು

ಆನೇಕಲ್: ತಾಲ್ಲೂಕಿನ ಗುಡ್ನನಹಳ್ಳಿ ಸಮೀಪದ ಶಿರಡಿ ಸಾಯಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಅಂತಿಮ ವರ್ಷದ ಬಿಇ ವಿದ್ಯಾರ್ಥಿಗಳು ತಾವು ತಯಾರಿಸಿದ ವಿಭಿನ್ನ ರೀತಿಯ ಪ್ರಾಜೆಕ್ಟ್‌ಗಳ ಪ್ರದರ್ಶನ ಮಾಡಿದರು.

ವಿದ್ಯುತ್ ಸಮಸ್ಯೆ ನಿವಾರಣೆಗಾಗಿ ಒಳಚರಂಡಿ ನೀರಿನಿಂದ ವಿದ್ಯುತ್ ತಯಾರಿಸುವ ಪ್ರಾಜೆಕ್ಟ್‌ನ್ನು ಪ್ರೊ.ಎಂ.ಸಿದ್ದೇಶ್ ನೇತೃತ್ವದಲ್ಲಿ ತಯಾರಿಸಲಾಗಿದ್ದು ಎಲ್ಲರ ಮನ ಸೆಳೆಯಿತು. ವಿದ್ಯಾರ್ಥಿಗಳು ಬೆಂಗಳೂರಿನಾದ್ಯಂತ ಸಂಚರಿಸಿ ಯಾವ ಭಾಗದಲ್ಲಿ ಚರಂಡಿ ನೀರು ವೇಗವಾಗಿ ಹರಿಯುತ್ತದೆ ಎಂಬ ಮಾಹಿತಿಯನ್ನು ಕಲೆ ಹಾಕಿದರು. ನಂತರ ಟರ್ಬೈನ್ ಸಿದ್ಧ ಮಾಡಿ ಇದರ ಮೇಲೆ ನೀರು ಹರಿಸಿದಾಗ ವಿದ್ಯುತ್ ಉತ್ಪಾದನೆಯಾಯಿತು ಎಂದು ವಿವರಿಸಿದರು. ಇದರಿಂದ ನೇರವಾಗಿ ವಿದ್ಯುತ್ ಬಲ್ಬ್ ಉರಿಯುವುದರ ಜೊತೆಗೆ ಬ್ಯಾಟರಿಯಲ್ಲಿಯೂ ವಿದ್ಯುತ್ ಶೇಖರಣೆ ಮಾಡಬಹುದು. ಬಿಬಿಎಂಪಿಯವರು ಇದನ್ನು ಬಳಸಿಕೊಂಡರೆ ವಿದ್ಯುತ್ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು ಎಂದು ಪ್ರೊ.ಸಿದ್ದೇಶ್ ವಿವರಿಸಿದರು.

ಸಮುದ್ರದಲ್ಲಿ ರಿಮೋಟ್ ಯಂತ್ರದ ಮೂಲಕ ಚಲಿಸುವ ದೋಣಿ, ಸಿಲಿಂಡರ್ ಮೂಲಕ ಟ್ರ್ಯಾಕ್ಟರ್ ಮಾದರಿಯ ವಾಹನ, ಮೊಬೈಲ್ ಮೂಲಕ ವಾಹನ ಚಾಲನೆ ವಿವಿಧ ರೀತಿಯ ಸಿಸಿ ಕ್ಯಾಮೆರಾಗಳು, ಅಂಧರು ನಡೆಯುವಾಗ ಮುಂದೆ ಇರುವ ವಸ್ತುಗಳ ಸ್ಪರ್ಶ ಮೂಡಿಸುವಂತಹ ತಂತ್ರಜ್ಞಾನ ಸೇರಿದಂತೆ ವಿವಿಧ ರೀತಿಯ ಪ್ರಾಜೆಕ್ಟ್‌ಗಳನ್ನು ವಿದ್ಯಾರ್ಥಿಗಳು ಸಿದ್ಧಪಡಿಸಿ ಪ್ರದರ್ಶಿಸಿದರು.

ಕಾಲೇಜಿನ ಅರುಣ್‌ಕುಮಾರ್, ಶಶಿಶೇಖರ್, ಶಿವಪ್ರಕಾಶ್, ರಾಘವೇಂದ್ರ ರಾವ್ ಮತ್ತಿತರರು ಹಾಜರಿದ್ದರು.